ಸ್ನೇಹಿತರಾದ ಡಾ. ಶಾಮಸುಂದರ್, ಪ್ರೇಮಾನಂದರು ತೇಜಸ್ವಿಯವರನ್ನು ಭೇಟಿಯಾಗುತ್ತಿದ್ದರು. ಅವರಿಬ್ಬರು ಈಗ ನಮಗೂ ಸ್ನೇಹಿತರೆ.

ಕೊನೆಯದಾಗಿ ಅವರ ಮೀನು ಶಿಕಾರಿಯ ಬಗ್ಗೆ ಹೇಳಬೇಕು. ತೇಜಸ್ವಿ, ಶ್ರೀರಾಮ್, ರಾಮದಾಸ್ ಇವರೆಲ್ಲಾ ಆಗಾಗ್ಗೆ ಸೇರಿ ಮೈಸೂರಿನ ಸುತ್ತಮುತ್ತ ಮೀನು ಬೇಟೆಗೆ ಹೊರಡುತ್ತಿದ್ದರು. ಇದಕ್ಕಾಗಿ ಸ್ಪೆಷಲ್ ಗಾಳಗಳೇನು? ಗಾಳಕ್ಕೆ ಸಿಕ್ಕಿಸಲು ಡಬ್ಬದಲ್ಲಿ ಎರೆಹುಳುಗಳು ಅಥವಾ ಏಡಿಗಳು! ಇವರ ಹವ್ಯಾಸಗಳು ಉಳಿದ ಸ್ನೇಹಿತರಿಗೂ ಸಾಂಕ್ರಾಮಿಕವಾಗಿ ಅಂಟಿಬಿಡುತ್ತಿದ್ದವು. ಅವರ ಮೀನು ಶಿಕಾರಿ ಬಗ್ಗೆ ಬರೆಯುತ್ತ ಹೋದರೆ ಅದೇ ಒಂದು ದೀರ್ಘ ಕಥಾನಕ ಆದೀತು. ಅದರಿಂದ ಕೊಂಚ ಸ್ಥೂಲವಾಗಿ ಹೇಳೋಣ. ತೇಜಸ್ವಿ ಎಲ್ಲಿದ್ದರೂ ಗೆಳೆಯರ ಜೊತೆ ಮೀನು ಶಿಕಾರಿಯ ಕಾರ್ಯಕ್ರಮವಿರುತ್ತಿತ್ತು. ಮೈಸೂರಿಗೆ ಬಂದಾಗ ಕುಕ್ಕರಹಳ್ಳಿ ಕೆರೆ, ಶ್ರೀರಂಗಪಟ್ಟಣದ ಕಾವೇರಿ ತೀರ, ನಾಗನ ಮಡುವು ಇಲ್ಲಿಗೆಲ್ಲಾ ಮೀನು ಶಿಕಾರಿಗಾಗಿ ಭೇಟಿಕೊಡುತ್ತಿದ್ದರು. ಒಮ್ಮೆ ಕುಕ್ಕರಳ್ಳಿ ಕೆರೆಯಲ್ಲಿ ಒಂದು ಗಡವಾ ಮೀನು ಇವರ ಗಾಳಕ್ಕೆ ಬಲಿಯಾಯಿತು. ಅದು ಎಷ್ಟು ದೊಡ್ಡದಿತ್ತೆಂದರೆ ಪಾತ್ರೆಯಲ್ಲಿದ್ದ ಸಾರಿನಲ್ಲಿ ಅದರ ತಲೆ ಮುಳುಗಲೇ ಇಲ್ಲ! ಅದು ಕಣ್ಣು ಬಾಯಿ ಬಿಟ್ಟುಕೊಂಡು ನೋಡುತ್ತಿದೆ! ನಾನು ಈ ದಡಿಯ ಮೀನನ್ನು ಯಾಕೆ ತಂದಿರಿ ಎಂದು ರೇಗಿದೆ. ಶ್ರೀರಾಮ್ ಸಮಾಧಾನದಿಂದ ಮೀನಿನ ತಲೆಯನ್ನು ಒಳಕಲ್ಲಿನ ಮೇಲಿಟ್ಟು ಹಾರೆಯಿಂದ ಬಲವಾದ ಏಟು ಹಾಕಿದಾಗ ತಲೆ 3–4 ಚೂರುಗಳಾಗಿ ಸಾರಿನೊಳಗೆ ಮುಳುಗಿತು. ಹೀಗಾದಾಗ ನಮ್ಮ ಗೆಳೆಯ ರಾಮದಾಸ್ ಅಮ್ಮ ಮಂಜಮ್ಮನವರು ಸಿಟ್ಟು ಮಾಡುತ್ತಿರಲಿಲ್ಲ 'ತಮ್ಮ ಮೀನನ್ನು ಇಲ್ಲಿ ತಾ' ಎಂದು ಈಸಿಕೊಂಡು ತಡರಾತ್ರಿಯಲ್ಲೂ ಅದನ್ನು ಚೊಕ್ಕ ಮಾಡಿ ಸಾರು, ಹುರಿದ ಮೀನು ತಯಾರಿಸಿ ಬಿಡುತ್ತಿದ್ದರು. ರಜಾ ಕಾಲದಲ್ಲಿ ನಾವೊಮ್ಮೆ 'ನಿರುತ್ತರ'ದಲ್ಲಿ ಸೇರಿದ್ದಾಗ ತೇಜಸ್ವಿ ಮತ್ತವರ ಗೆಳೆಯರ ಪಟಾಲಂ ಅವರ ತೋಟದಿಂದ ಕೆಲವು ಕಿ.ಮೀ. ದೂರದಲ್ಲಿದ್ದ ಹೇಮಾವತಿ ನದಿಯ ಕಮಾನ್ ಸೇತುವೆ ಬಳಿ ಮೀನು ಬೇಟೆಗೆ ಹೊರಟಿತು. ಊಟ ಅಲ್ಲಿಗೇ ತರಬೇಕೆಂಬ ಆಜ್ಞೆ ಬೇರೆ! ರಾಜೇಶ್ವರಿಯವರ ಸಹಾಯಕ್ಕೆ ನಾನು ಸೇರಿ ಬಿಸಿಬೇಳೆಭಾತ್, ಕೇಸರಿಭಾತ್, ಮೊಸರನ್ನ, ಹಪ್ಪಳಗಳನ್ನು ಒಂದೇ ಉಸಿರಿಗೆ ತಯಾರಿಸಿದೆವು. ಎಲ್ಲವನ್ನೂ ತುಂಬಿಕೊಂಡು ನಾನು ಕಾರಿನ ಹಿಂದಿನ ಸೀಟಿನಲ್ಲಿ ಕೂತೆ, ಮುಂದೆ ರಾಜೇಶ್ವರಿಯವರ ಡ್ರೈವಿಂಗ್! ಹಪ್ಪಳ ಪುಡಿಪುಡಿಯಾಗದಂತೆ ನಾಜೂಕಾಗಿ ಹಿಡಿದುಕೊಳ್ಳಬೇಕಾಗಿತ್ತು. ರಾಜೇಶ್ವರಿಯವರಂತೂ ನಾನು ಇನ್ಮೇಲೆ ಇಂಥ ತರಾತುರಿ ಅಡುಗೆ ಒಪ್ಪಿಕೊಳ್ಳೊದಿಲ್ಲಪ್ಪಾ ಎಂದು ಫರ್ಮಾನು ಹೊರಡಿಸಿದರು. ಕಮಾನು ಸೇತುವೆ ತಲುಪಿ, ಎಲ್ಲ ಪಾತ್ರೆಗಳನ್ನು ಹುಷಾರಾಗಿ ನದಿಯ ಮಗ್ಗಲಿಗೆ ಎತ್ತಿಕೊಂಡುಹೋಗಿ ನಾವಿಬ್ಬರು ಸಂತೆಯಲ್ಲಿ ವಡೆ ಮಾರುವ ಹೆಂಗಸರಂತೆ ಕುಳಿತಿದ್ದರೆ, ರಾಮದಾಸ್ ಅಂದರು, 'ಅಲ್ಲಾ! ಬಿಸಿಬೇಳೆಭಾತನ್ನು ಬಿಸಿ ಮಾಡಲು ಒಂದು ಸೀಮೆಯೆಣ್ಣೆ ಸ್ಟೌ ತಂದಿದ್ದರೆ ಚೆನ್ನಾಗಿತ್ತು!' ನಾವಿಬ್ಬರು ಮುಖಮುಖ ನೋಡಿಕೊಂಡೆವು.

ತೇಜಸ್ವಿ ಮತ್ತು ಗೆಳೆಯರ ಮೀನು ಬೇಟೆ ಕೇವಲ ತಿನ್ನುವ ಚಟ ಅಥವಾ ಶೋಕಿಗಾಗಿ ಹಚ್ಚಿಕೊಂಡ ಹವ್ಯಾಸವಾಗಿರಲಿಲ್ಲ. ಎಷ್ಟೋ ವೇಳೆ ಗಾಳಕ್ಕೆ ಬಿದ್ದ ಮೀನು ಯಾವ ಬಗೆಯದು, ಇವೇಕೆ ಇದೇ ಹೊಳೆ, ಕೆರೆಯಲ್ಲಿ ಕಾಣಸಿಗುತ್ತವೆ ಎಂದು ಯೋಚಿಸುತ್ತಿದ್ದರು. ಒಂದೊಂದು ಸಲ ಹಿಡಿದ ಮೀನಿಗೆ ಅದರ ಸ್ವಾತಂತ್ರ್ಯ ಕೊಟ್ಟು ಪುನಃ ನೀರಿಗೆ ಬಿಟ್ಟುಬಿಡುತ್ತಿದ್ದರು. ಗಂಟೆಗಟ್ಟಲೆ ಸದ್ದು ಮಾಡದೆ ಗಾಳ ಹಾಕಿ ಕುಳಿತ ತೇಜಸ್ವಿ ಮತ್ತು ಗೆಳೆಯರನ್ನು ಮೀನುಗಳು ಯೋಚನೆಯ ಬಲೆಯಲ್ಲಿ ಸಿಕ್ಕಿಸುತ್ತಿದ್ದವು. ಇವೇಕೆ ಮಡುವಿನಲ್ಲೇ ಕಂಡುಬರುತ್ತವೆ? ಆಳ ನೀರಿನಲ್ಲಿ ವಾಸಿಸುವ ಮೀನುಗಳ, ತೆಳ್ಳಗೆ ಹರಿವ ನೀರಿನ ಪುಟಾಣಿ ಮೀನುಗಳ ಬೇಟದ ಆಟ ಹೇಗೆ? ಸಂತಾನೋತ್ಪತ್ತಿ ಯಾವಾಗ? ಹೀಗೆ ಇವರ ಯೋಚನಾ